ಕಲ್ಪನೆ ಕಾವ್ಯ



## ಬದುಕಿನ ರಂಗೋಲಿ

ಮೇಲಿರುವ ನೇಸರನು ತಲೆ ಸುಟ್ಟರೇನು
ಮೀನುಗಳ ಹರಡುತ್ತ ಒಣಗಿಸುವೆ ನಾನು
ಉದರ ತುಂಬುವ ಮೀನು ಎಲ್ಲರಿಗೂ ಬೇಕು
ಒಪ್ಪ ಓರಣದಿ ಕೆಲಸ ಮಾಡಿದರೆ ನಾನು

ಉದರಕೂ ತಂಪಿತ್ತು ಕಣ್ಣಿಗೂ ಸೊಂಪಾಗಿ
ಉಡಿಯಲ್ಲಿ ತುಂಬಿಬಹ ಹಣವು ಹೆಚ್ಚಾಗಿ
ಮುಂದಿನ ದಿನಗಳು ತರಬಹುದು ಒಳಿತನ್ನು
ಧಗ ಧಗೆಯ ಒಂದಿಷ್ಟು ಕಡೆಗಣಿಸಿದರೆ ನಾನು

ಸಗರ ಪುತ್ರಿಯಾಗಿರುವ ಮತ್ಸ್ಯಗಂಧಿಯು ನಾನು
ಸಾಗರದ ತಡಿಯಲ್ಲಿ ಹುಟ್ಟಿ ಬೆಳೆದವಳು
ವಿಧ ವಿಧದ ಮೀನುಗಳು ಬೇಕಂತೆ ಎಲ್ಲರಿಗೆ
ಒಣಗಿಸಲು ಕೆಲ ಸಮಯ ಉಳಿಯುವುವು
ಜೋಕೆ

ಅಕ್ಕರೆಯ ಕೆಲಸದಲಿ ಸಂಭ್ರಮವ ಹುಡುಕುವೆನು
ಸಡಗರದಿ ಈ ದುಡಿಮೆ ಮಾಡಿ ಮುಗಿಸುವೆನು
ಹಿಡಿದ ಮೀನುಗಳ ರಂಗೋಲಿ ಹಾಕುತಲಿ
ಅದರಲ್ಲೆ ಬದುಕಿಗೆ ಭಾಷ್ಯ ಬರೆಯುವೆನು

**-ಮಮತ ಕೆ. ಮೂರ್ತಿ, ಉಜಿರೆ**

## ಶರಧಿ ಮಕ್ಕಳು ನಾವು

ಬಿತ್ತು ಇಂದು ನಾಳೆ ಫಸಲು ತಾನೇ ಜಗದ
ನಿಯಮ
ಇಂದು ಅಳಲು ನಾಳೆ ಗಮಲು ಬೇಕು ಇನಿತು
ಸಂಯಮ

ಹೊಟ್ಟೆ ಚೀಲದ ಮೊರೆವ ಆರ್ತನಾದವ ಕೇಳಿ
ಮನಗೆದ್ದ ಇನಿಯನದೋ ಅಬ್ಧಿ ಆಳಕೆ ತೆರಳಿ
ಸಿಕ್ಕ ಜಲಚರಗಳದೋ ಮೊಗೆದು ಸುಗ್ಗಿಯ
ಮಾಡಿ
ತಂದದ್ದರಡಿದೆನಿದೋ ಗುಂಪು ರಾಶಿಯ ಹೂಡಿ

ಕಡಲ ಒಕ್ಕಲು ನಾವು ಶರಧಿ ಮಕ್ಕಳು ನಾವು
ಮೀನು ಒಣಗಲು ನಮ್ಮ ಬಾಳು ಹಸುರು
ಬೆಂಗದಿರ ತಾಪವೋ ಬಿಸಿಲ ಝಳದಾಟವೋ
ದುಡಿಮೆ ಜೀವನ ನಮ್ಮ ಬಾಳ ಉಸಿರು

ಇಂದು ದುಡಿದರೆ ಅನ್ನ ಇಲ್ಲದಿರೆ ಬರಿ ಬನ್ನ
ಬೆವರು ಹನಿಗಳ ಬಿತ್ತಿ ಬೆಳೆಯುವೆನು ನಾಳೆ
ಇಂದು ದುಡಿದರೆ ಬಾಳು ಇಲ್ಲದಿರೆ ಬರಿ ಗೋಳು
ಬಾಳುವೆವು ತೋಳುಗಳ ಕಸುವ ನಂಬಿ

ಮುರುಕು ಗುಡಿಸಲ ವಾಸ ನಡುನಡುವೆ
ಉಪವಾಸ
ಬಾಳಿಗದು ಒದಗುವುದೇ ಆ ಚೈತ್ರಮಾಸ
ಬೆಳಕಿರದ ದಾರಿಯಲಿ ಬಿರುಗಾಳಿ ಬದುಕಿನಲಿ
ಮೂಡುವುದೇ ನಮಗದುವೆ ಆ ಮಧುರ ಮಾಸ

**-ಗುರುರಾಜ ಹ. ನಾಯಕ,
ಬೆಂಗಳೂರು**